# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **2372**

**ಮಾನ್ಯ ಸದಸ್ಯರ ಹೆಸರು** : **ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)**

**ಉತ್ತರಿಸಬೇಕಾದ ದಿನಾಂಕ** : **22.03.2022**

**ಉತ್ತರಿಸಬೇಕಾದ ಸಚಿವರು** : **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

| **ಕ್ರ ಸಂ** | **ಪ್ರಶ್ನೆಗಳು** | **ಉತ್ತರ** |
|---|---|---|
| **ಅ)** | ಗರ್ಭಿಣಿಯರು ಹಾಗೂ ಬಾಣಂತಿಯರು ಅಪೌಷ್ಟಿಕತೆ, ರಕ್ತ ಹೀನತೆಯಿಂದ ದುರ್ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| **ಆ)** | ಬಂದಿದ್ದಲ್ಲಿ, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಪೌಷ್ಟಿಕತೆ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ಒದಗಿಸುವುದು) | ಗರ್ಭಿಣಿಯರು ಹಾಗೂ ಬಾಣಂತಿಯವರಿಗೆ ಪೌಷ್ಟಿಕತೆ ಹೆಚ್ಚಿಸಲು ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆಯಿಂದ ಕೈಗೊಂಡ ಕ್ರಮಗಳ ವಿವರ **ಅನುಬಂಧ-01**ರಲ್ಲಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರ **ಅನುಬಂಧ-02**ರಲ್ಲಿ ನೀಡಲಾಗಿದೆ. |
| **ಇ)** | ಕಳೆದ 03 ವರ್ಷಗಳಿಂದ ಈ ಯೋಜನೆಗೆ ಸರ್ಕಾರವು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? (ವಿವರ ನೀಡುವುದು). | ಕಳೆದ 03 ವರ್ಷಗಳಿಂದ ಈ ಯೋಜನೆಗೆ ಸರ್ಕಾರವು ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ **ಅನುಬಂಧ-03**ರಲ್ಲಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ **ಅನುಬಂಧ-04**ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಆ.ಕು.ಕ 52 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ-1 (ಪ್ರಶ್ನೆ ಸಂಖ್ಯೆ-2372)

ಸರ್ಕಾರವು ಗರ್ಭಿಣಿಯರು ಹಾಗೂ ಬಾಣಂತಿಯವರಿಗೆ ಪೌಷ್ಠಿಕತೆ ಹೆಚ್ಚಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಮಕ್ಕಳು ಮತ್ತು ಹದಿಹರೆಯದವರಲ್ಲಿ ರಕ್ತಹೀನತೆಯನ್ನು ಹೋಗಲಾಡಿಸಲು ಪ್ರತಿ ವಾರ ಕಬ್ಬಿಣಾಂಶದ ಮಾತ್ರೆಗಳನ್ನು ನೀಡಲಾಗುತ್ತಿದೆ.
2. ಹದಿಹರೆಯದವರಿಗೆ ಮತ್ತು ವಿವಾಹಪೂರ್ವ ಮಹಿಳೆಯರಿಗೆ ರಕ್ತಹೀನತೆಯನ್ನು ಹೋಗಲಾಡಿಸಲು ಇಲಾಖೆಯ ಮುಂಚೂಣಿ ಕಾರ್ಯಕರ್ತೆಯರಾದ ಆಶಾ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಂದ ಆಪ್ತ ಸಮಾಲೋಚನೆ ಮತ್ತು ಕಬ್ಬಿಣಾಂಶದ ಮಾತ್ರೆಗಳ ಸೇವನೆ ಬಗ್ಗೆ ಅರಿವು ಮೂಡಿಸಲಾಗುತ್ತದೆ.
3. ಗರ್ಭಿಣಿಯರ ಪ್ರಸವಪೂರ್ವ ಆರೈಕೆ ಮತ್ತು ಬಾಣಂತಿಯರಲ್ಲಿ ರಕ್ತಹೀನತೆಯನ್ನು ಪತ್ತೆಹಚ್ಚಲು ಪರೀಕ್ಷಿಸಲಾಗುತ್ತಿದೆ.
4. ರಕ್ತಹೀನತೆಯನ್ನು ಆರೋಗ್ಯ ಕೇಂದ್ರಗಳ, ಉಪ ಕೇಂದ್ರಗಳ ಆಸ್ಪತ್ರೆಗಳಲ್ಲಿ ಹಾಗೂ ಸಮುದಾಯ ಮಟ್ಟದಲ್ಲಿ ಪತ್ತೆ ಹಚ್ಚಲಾಗುತ್ತಿದೆ.
5. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ಡಿಜಿಟಲ್ ಹಿಮೋಗ್ಲೋಬಿನೋಮೇಟರ್ ಕೊಡಿಸಲಾಗಿದ್ದು ಇದರಿಂದ ಕೆಳಹಂತದಲ್ಲಿ ಬಹುಬೇಗನೆ ರಕ್ತಹೀನತೆಯನ್ನು ಪತ್ತೆಹಚ್ಚಲಾಗುತ್ತಿದೆ'
6. ತೀವ್ರತರ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ JSSK ಕಾರ್ಯಕ್ರಮದಡಿಯಲ್ಲಿ ಉಚಿತ Blood Transfusion ವ್ಯವಸ್ಥೆ ಮಾಡಲಾಗಿದೆ.
7. ಮೃದುರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ ದಿನಕ್ಕೆ 2 ಬಾರಿಯಂತೆ ಒಟ್ಟು 12 ತಿಂಗಳಿಗೆ 720 IFA ಮಾತ್ರೆಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ. ರಕ್ತ ವೃದ್ಧಿಸುವ ಈ ಮಾತ್ರೆಗಳನ್ನು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಮತ್ತು ಆಶಾ ಕಾರ್ಯಕರ್ತೆಯರಿಂದಲೂ ವಿತರಿಸಲಾಗುತ್ತಿದೆ.
8. ರಕ್ತಹೀನತೆಯನ್ನು ತಡೆಗಟ್ಟಲು ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದಲ್ಲಿ ವರ್ಷಕ್ಕೆ 2 ಬಾರಿ ಉಚಿತವಾಗಿ ಎಲ್ಲಾ ಬಾಣಂತಿಯರಿಗೂ 400mg Albendozole ಮಾತ್ರೆಗಳನ್ನು ವಿತರಿಸಲಾಗುತ್ತಿದೆ.
9. ರಕ್ತಹೀನತೆಯನ್ನು ನಿವಾರಿಸಲು Iron Sucrose ಇಂಜಕ್ಷನ್ ಗಳನ್ನು ನೀಡಲಾಗುತ್ತಿದೆ. ತೀವ್ರತರ ರಕ್ತಹೀನತೆಯಿಂದ ಬಳಲುತ್ತಿರುವ ಪ್ರತಿ ಗರ್ಭಿಣಿ/ಬಾಣಂತಿಗೆ 10 Ampoules Iron Sucrose ಇಂಜಕ್ಷನ್‌ಗಳು ಸರಾಸರಿಯಾಗಿ ನೀಡಲಾಗುತ್ತಿದೆ.
10. ಬಾಣಂತಿಯರಲ್ಲಿ ಪೌಷ್ಠಿಕತೆಯನ್ನು ಹೋಗಲಾಡಿಸಲು ಹೆರಿಗೆ ಆದ ಕೂಡಲೇ ರೂ.600/700 ಜನನಿ ಶಿಶು ಸುರಕ್ಷಾ ಯೋಜನೆ (JSY) ಅಡಿಯಲ್ಲಿ ಬಿ.ಪಿ.ಎಲ್ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

## ಅನುಬಂಧ-02

**ಗರ್ಭಿಣಿಯರು ಹಾಗೂ ಬಾಣಂತಿಯರ ಪೌಷ್ಠಿಕತೆ ಹೆಚ್ಚಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರ:**

1. ಗರ್ಭಿಣಿಯರು ಹಾಗೂ ಬಾಣಂತಿಯರ ಪೌಷ್ಠಿಕತೆ ಹೆಚ್ಚಿಸಲು ಮಾತೃಪೂರ್ಣ ಯೋಜನೆಯಡಿ ಪ್ರತಿ ಫಲಾನುಭವಿಗಳಿಗೆ ರೂ.21.00/-ರ ಘಟಕ ವೆಚ್ಚದಂತೆ 1342 ಕ್ಯಾಲೋರಿ ಮತ್ತು 40 ಗ್ರಾಂ. ಪ್ರೋಟೀನ್ ಒಳಗೊಂಡ ಮಧ್ಯಾಹ್ನದ ಪೌಷ್ಠಿಕ ಊಟದಲ್ಲಿ ಬಿಸಿಯೂಟವನ್ನು ನೀಡಲಾಗುತ್ತಿದೆ. ಈ ಪೌಷ್ಠಿಕ ಊಟದಲ್ಲಿ ಅನ್ನ, ಸಾಂಬಾರ್, ಪಲ್ಯ, ಒಂದು ಮೊಟ್ಟೆ, 200 ಎಂ.ಎಲ್ ಹಾಲು ಮತ್ತು ಶೇಂಗಾ ಚಿಕ್ಕಿ ಒಳಗೊಂಡಿರುತ್ತದೆ.

2. ತಾಯಂದಿರ ಸಭೆ ಹಾಗೂ ಪೌಷ್ಠಿಕ ಆಹಾರ ಶಿಬಿರಗಳ ಸಭೆಯಲ್ಲಿ ಪೌಷ್ಠಿಕತೆಯನ್ನು ಹೆಚ್ಚಿಸಲು ತೆಗೆದುಕೊಳ್ಳಬೇಕಾದ ಪೌಷ್ಠಿಕಾಂಶವುಳ್ಳ ಆಹಾರ ಪಾದಾರ್ಥಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

3. ಪೋಷಣ್ ಅಭಿಯಾನ ಯೋಜನೆಯಲ್ಲಿ ಪ್ರತಿ ತಿಂಗಳು ಎರಡು ಸಮುದಾಯ ಆಧಾರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಚಟುವಟಿಕೆಯಲ್ಲಿ ಪೌಷ್ಠಿಕತೆಯ ಬಗ್ಗೆ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ತಿಳುವಳಿಕೆ ನೀಡಲಾಗುತ್ತಿದೆ.

## ಅನುಬಂಧ-3 (ಪ್ರಶ್ನೆ ಸಂಖ್ಯೆ-2372)

| Sl No | New FMR Code | Budget Head | FY 2019-20 Rs.Lakh | FY 2020-21 Rs.Lakh | FY 2021-22 Rs.Lakh | Total Rs.Lakh |
|---|---|---|---|---|---|---|
| 1 | 1.1.1.2 | Free Diet | 700.02 | 358.42 | 537.63 | 1596.07 |
| 2 | 1.1.1.3 | Free Blood Transfusion | 359.01 | 359.01 | 220 | 938.02 |
| 3 | 2.3.1.2 | Line listing and follow-up of severely anemic women (Per ANM) | 39.9 | 39.9 | 39.9 | 119.7 |
| 4 | 6.2.1.6 | Albendazole tablets for Pregnant& Lactating Mothers | 20.75 | 39.1 | 27.18 | 87.03 |
| 5 | 6.2.1.7.1 | IFA tablets for Pregnant& Lactating Mothers | 577.25 | 0 | 270 | 847.25 |
| 6 | 6.2.1.7.3 | Calcium tablets for Pregnant& Lactating Mothers | 860.76 | 0 | 288 | 1148.76 |
| 7 | 6.2.1.7.2 | Folic Acid Tablets (400 mcg) for Pregnant women | 0 | 0 | 94.5 | 94.5 |
| 8 | 6.2.1.8 | Procurement & supply Parental Iron Inj. | 165.68 | 161.98 | 90 | 417.66 |
| | | Total | 2723.37 | 958.41 | 1567.21 | 5248.99 |

## ಅನುಬಂಧ-04

**ಗರ್ಭಿಣಿಯರು ಹಾಗೂ ಬಾಣಂತಿಯರ ಪೌಷ್ಠಿಕತೆ ಹೆಚ್ಚಿಸಲು ಕಳೆದ 03 ವರ್ಷಗಳಿಂದ ಈ ಯೋಜನೆಗೆ ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬಿಡುಗಡೆ ಮಾಡಿರುವ ಅನುದಾನ ವಿವರ:**

1. ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದ ಮಾತೃ ಪೂರ್ಣ ಯೋಜನೆಯಲ್ಲಿ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಪೌಷ್ಠಿಕ ಆಹಾರವನ್ನು ಒದಗಿಸಲಾಗುತ್ತಿದೆ.

2. ಕಳೆದ 03 ವರ್ಷಗಳಲ್ಲಿ ಪೂರಕ ಪೌಷ್ಠಿಕ ಆಹಾರ ಯೋಜನೆಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.

| ವರ್ಷ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|
| 2018-19 | 215042.00 |
| 2019-20 | 215042.00 |
| 2020-21 | 197174.00 |